ಈ ತಿದ್ದುಪಡಿ ಸೂಚಿಸಲು ನನಗೆ ಹಲವಾರು ಕಾರಣಗಳೂ ಇದ್ದವೆನ್ನಿ. ಅವುಗಳನ್ನು ಮುಂದೆ ಕೊಟ್ಟಿದ್ದೇನೆ, ಓದಿಕೊಳ್ಳಿ. ನಂತರ ನಾನು ಸೂಚಿಸುವ ತಿದ್ದುಪಡಿ ಸರಿಯೋ ತಪ್ಪೋ ಎಂಬುದನ್ನು ನೀವೇ ತೀರ್ಮಾನಿಸಿ.

ನನಗನ್ನಿಸುವಂತೆ 'ಆಸೆಯೇ ದುಃಖಕ್ಕೆ ಕಾರಣ' ಎನ್ನುವ ಅಭಿಪ್ರಾಯ ಸರಿಯಲ್ಲ. ಯಾಕೆಂದರೆ, ಆಸೆಯೇ ಇಲ್ಲದಿದ್ದರೆ ಪ್ರಪಂಚವೇ ಮುನ್ನಡೆಯುವುದಿಲ್ಲ. ಎಲ್ಲ ವಿಧದ ಅಭಿವೃದ್ಧಿ ಕಾರ್ಯಗಳ ಹಿನ್ನೆಲೆಯಲ್ಲಿ ಆಸೆಯ ಬಲವಾದ ಅಡಿಪಾಯ ಇದ್ದೇ ಇರುತ್ತದೆ ಅನ್ನುವುದು ನನ್ನ ಗಟ್ಟಿ ನಂಬಿಕೆ.

ಹೆಚ್ಚು ದೂರ ಹೋಗುವುದು ಬೇಡ. ಸ್ವಂತಕ್ಕೊಂದು ಮನೆ ಕಟ್ಟಿಕೊಳ್ಳಬೇಕೆಂಬ ಆಸೆಯ ಬೀಜ ನಿಮ್ಮ ಮನದಲ್ಲಿ ಮೊಳಕೆಯೊಡೆದಿದ್ದರೆ ನೀವು ನಿಮ್ಮ ಮನದನ್ನೆ, ಮಕ್ಕಳೊಡನೆ ಬಾಡಿಗೆ ಮನೆಯಲ್ಲೇ ಕೊನೆಯವರೆಗೂ ಬಡಕೊಂಡು ಸಾಯಬೇಕಾಗುತ್ತದೆ. ಇಲ್ಲದಿದ್ದರೆ, ಯಾವುದೋ ಒಂದು ಮರದ ಅಡಿಯಲ್ಲಿ ಮೂರು ಕಲ್ಲು ಇಟ್ಟು ಒಲೆ ಹೊತ್ತಿಸಿ ಅಡುಗೆ ಮಾಡಿಕೊಂಡು ಕಾಲಯಾಪನೆ ಮಾಡಬೇಕಾಗುತ್ತದೆ! ಅಂದರೆ, ಒಟ್ಟು ತಾತ್ಪರ್ಯವೇನೆಂದರೆ, ನೀವು ಸ್ವಂತ ಮನೆಗೆ ಒಡೆಯರಾಗಿ ಸಂತೋಷದಿಂದ, ಸಂತೃಪ್ತಿಯಿಂದ ಜೀವಿಸಲು ಬೇಕಾಗುವ ಮೂಲ ದ್ರವ್ಯ ಆಸೆಯೇ ಅಂತಾಗುತ್ತದಲ್ಲವೇ? ಅಂದ ಮೇಲೆ ಆಸೆಯ ಕಾರಣದಿಂದ ದುಃಖವೆಲ್ಲಿಯದು? ಬದಲಿಗೆ ಸಂತೋಷ ಪ್ರಾಪ್ತಿ ತಾನೆ? (ಅಂದ ಹಾಗೆ ಇಲ್ಲಿ ಜಗತ್ತಿಗೇ ಗೊತ್ತಿರುವ ಗುಟ್ಟಿನ ವಿಷಯವೊಂದಿದೆ. ನೀವು ಯಾರಲ್ಲೂ ಬಾಯಿ ಬಿಡಬೇಡಿ ಮತ್ತೆ! ನಿಮ್ಮ ಮನದಲ್ಲಿ ಆಸೆಯ ಬೀಜವನ್ನು ಬಿತ್ತಿ, ಅದಕ್ಕೆ ಗೊಬ್ಬರ ಹಾಕಿ ನೀರೆರೆದು ಮೊಳಯುವಂತೆ ಮಾಡುವವರು ಯಾರೆಂದುಕೊಂಡಿದ್ದೀರಿ? ಅದು ಬೇರಾರೂ ಅಲ್ಲ, ಎದುರು ಮನೆಯವರ ಮನದನ್ನೆಯೇ! ಈ ವಾಕ್ಯವನ್ನು ಗಟ್ಟಿಯಾಗಿ ಓದಬೇಡಿ. ಮನಸ್ಸಿನಲ್ಲೇ ಓದಿಕೊಳ್ಳಿ).

ಈಗ ಇಲ್ಲೊಂದು ಸಮಸ್ಯೆ ಎದುರಾಗುತ್ತದೆ. ಆಸೆಯೇ ದುಃಖಕ್ಕೆ ಕಾರಣವಾದರೆ ನಿರಾಸೆಯು ಸುಖಕ್ಕೆ ಕಾರಣವಾಗುತ್ತದೋ? (ಏಕೆಂದರೆ, ಆಸೆ ಎಂಬ ಪದಕ್ಕೆ ನಿರಾಸೆ ಎಂಬುದು ವಿರುದ್ಧ ಪದವಷ್ಟೇ) ಇಲ್ಲ. ನಿರಾಸೆ ಎಂಬುದು ಎಂದಿಗೂ ಸುಖ – ಸಂತೋಷಗಳಿಗೆ ಕಾರಣವಾಗುವುದಿಲ್ಲ ಎಂಬ ವಿಚಾರವು ಮೇಲ್ನೋಟಕ್ಕೆ ಸಾಬೀತಾಗುತ್ತದೆ ಅಲ್ಲವೇ? ಅಂದರೆ ನಿರಾಸೆಯೇ ದುಃಖಕ್ಕೆ ಕಾರಣ ಅಂತಾಗುತ್ತದೆ.

ಹಾಗೆಯೇ ಇನ್ನೊಂದು ವಿಚಾರವನ್ನು ಗಮನಿಸಬಹುದು. ಈಗ, ಒಂದು ಊರನ್ನು, ಒಂದು ಪಟ್ಟಣವನ್ನು, ಒಂದು ನಗರವನ್ನು ಉದ್ಧಾರ ಮಾಡಬೇಕೆಂಬ ಆಸೆಯು ಹಲವರಲ್ಲಿ ಉಂಟಾದಾಗಲೇ ಆಯಾ ಊರಿನ, ಪಟ್ಟಣದ, ನಗರದ ಅಭಿವೃದ್ಧಿ ಸಾಧ್ಯ. ಬದಲಿಗೆ, 'ಆಸೆಯೇ ದುಃಖಕ್ಕೆ ಕಾರಣ' ಅಂತ ಬುದ್ಧನ ಮಾತು ನಂಬಿಕೊಂಡು ನಕಾರಾತ್ಮಕ ಭಾವದಿಂದ ಎಲ್ಲರೂ ಕೈಕಟ್ಟಿ ಕುಳಿತಿದ್ದರೆ ಊರೂ ಇಲ್ಲ. ನಗರವೂ ಇಲ್ಲ. ಪಟ್ಟಣವೂ ಇಲ್ಲ ಎಂಬಂತಹ ವಿಚಿತ್ರ ಪರಿಸ್ಥಿತಿ ಉಂಟಾಗುತ್ತಿತ್ತು. ನಾವು ನೀವೆಲ್ಲ ಮೈಗೆ – ಬಟ್ಟೆಯ ಬದಲು – ಸೊಪ್ಪು ಸುತ್ತಿಕೊಂಡು ಕಾಡಿನ ಗುಹೆಗಳಲ್ಲಿ ವಾಸಿಸಬೇಕಾಗುತ್ತಿದ್ದಿತು!

ನೀವು ಓದಿ, ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಲು, ಉತ್ತಮ ಉದ್ಯೋಗವನ್ನು ಹಿಡಿಯಲು, ಮದುವೆಯಾಗಿ ಸಂಸಾರವಂದಿಗರಾಗಿ ಮಕ್ಕಳನ್ನು ಪಡೆಯಲು ಸಹ ಆಸೆಯೇ ಮೂಲ ದ್ರವ್ಯ.

ನಿಮ್ಮನ್ನು ನಿಮ್ಮ ಅಪ್ಪ, ಅಮ್ಮಂದಿರು ಓದಿಸಿ, ಒಳ್ಳೆಯ ಹುದ್ದೆಯನ್ನಲಂಕರಿಸುವಂತೆ ಮಾಡುವುದರಲ್ಲಿ ಸಹ 'ಮಗ ನಮ್ಮ ವೃದ್ಧಾಪ್ಯದಲ್ಲಿ ನಮ್ಮನ್ನು ನೋಡಿಕೊಂಡಾನು' ಎಂಬ